## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 234 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 12.08.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗಣಿ ಇಲಾಖೆಯ ವ್ಯಾಪ್ತಿಯಲ್ಲಿ ಯಾವ ಯಾವ ಖನಿಜಗಳು ಒಳಪಟ್ಟಿವೆ; ಕರಾವಳಿ ಕರ್ನಾಟಕದಲ್ಲಿ ಹೆಚ್ಚಾಗಿ ಕಟ್ಟಡ ನಿರ್ಮಾಣಕ್ಕೆ ಬಳಸುವ ಮರಳು ಮತ್ತು ಕೆಂಪು ಕಲ್ಲುಗಣಿಗೆ ಅನ್ವಯಿಸುವ ನಿಯಮಗಳು ಯಾವುವು; ಇಲ್ಲಿಯ ಕೆಂಪು ಕಲ್ಲಿನಲ್ಲಿ ಖನಿಜಾಂಶ ಇದೆಯೇ; | ➢ MM(D&R) ಕಾಯ್ದೆ 1957ರ Schedule-I ಖನಿಜಗಳ Part-A ಮತ್ತು Part-B ಖನಿಜಗಳನ್ನು ಹೊರತುಪಡಿಸಿ, Part-C ರಲ್ಲಿ ನಮೂದಿಸಿರುವ ಖನಿಜಗಳು ಮಾತ್ರ ಗಣಿ ಮತ್ತು ಭೂವಿಜ್ಞಾನ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತದೆ. ಅವುಗಳಲ್ಲಿ ಪ್ರಮುಖವಾಗಿರುವವು ಚಿನ್ನ ಕಬ್ಬಿಣದ ಅದಿರು, ಲೈಮ್ ಸ್ಟೋನ್, ಬಾಕ್ಸೈಟ್ ಮ್ಯಾಂಗನೀಸ್, ತಾಮ್ರ, ಇತ್ಯಾದಿ ಹಾಗೂ ಉಪಖನಿಜಗಳಾದ ಅಲಂಕಾರಿಕ ಶಿಲೆ, ಸ್ಯಾಂಡ್ ಸ್ಟೋನ್, ಡೋಲಮೈಟ್, ಡುನೈಟ್, ಮೈಕಾ, ಸಿಲಿಕಾ ಸ್ಯಾಂಡ್, ಫೆಲ್ಸ್ ಫರ್, ಜಾಸ್ಪರ್, ಅಲಂಕಾರಿಕ ಶಿಲೆಯಾಗಿ ಬಳಕೆಯಾಗುವ ಸ್ಟಿಯಾಟೈಟ್, ಕಯಲಿನ್ ಮತ್ತು ಚೈನಾ ಕ್ಲೇ, ಕಟ್ಟಡ ಕಲ್ಲು, ಮರಳು, ಲ್ಯಾಟರೈಟ್, ಕ್ಲೇ, ಕ್ವಾಡ್ಜ್, ಇತ್ಯಾದಿ ಉಪಖನಿಜಗಳು ದೊರೆಯುತ್ತವೆ.<br>➢ ಕೆಂಪು ಕಲ್ಲು (ಲ್ಯಾಟರೈಟ್) ಖನಿಜವು $Al_2O_3$ ಖನಿಜಾಂಶದ ತಾಂತ್ರಿಕ ಅಂಶಗಳ ಆಧಾರದ ಮೇಲೆ ಮುಖ್ಯ ಖನಿಜ ಮತ್ತು ಉಪಖನಿಜಗಳಾಗಿ ವರ್ಗೀಕೃತಗೊಳ್ಳುತ್ತದೆ.<br>➢ ರಾಜ್ಯದಲ್ಲಿ ಮರಳು ಮತ್ತು ಕೆಂಪು ಕಲ್ಲುಗಣಿಗಾರಿಕೆಗೆ ಸಂಬಂಧ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮಗಳು ಅನ್ವಯವಾಗುತ್ತವೆ.<br>➢ ಕೆ.ಎಂ.ಎಂ.ಸಿ.ಆರ್ ನಿಯಮಗಳು ಉಪಖನಿಜಗಳ ಗಣಿ ಗುತ್ತಿಗೆ/ ಲೈಸನ್ಸ್ ಕಾರ್ಯದೇಶ ನೀಡಲು ಮಾತ್ರ ಅವಕಾಶವಿರುತ್ತದೆ. ನಿಯಮ 3A(a), 3A(b) ಮತ್ತು 32 ರಡಿಯಲ್ಲಿನ ಅವಕಾಶದಂತೆ ಉಪಖನಿಜ ವ್ಯಾಪ್ತಿಗೆ ಒಳಪಡುವ ಕೆಂಪು ಕಲ್ಲು (ಲ್ಯಾಟರೈಟ್) ಉಪಖನಿಜಗಳನ್ನು ಖಾಸಗಿ/ ಪಟ್ಟಾ ಜಮೀನುಗಳಲ್ಲಿ ತೆರವುಗೊಳಿಸಲು ಕಾರ್ಯನುಮತಿ/ ಲೈಸನ್ಸ್ ನೀಡಲು ನಿಯಮದಲ್ಲಿ ಅವಕಾಶವಿರುತ್ತದೆ.<br>➢ ಕರಾವಳಿ ಜಿಲ್ಲೆಗಳಲ್ಲಿ ದೊರೆಯುವ ಕೆಂಪು ಕಲ್ಲಿನಲ್ಲಿ Silica ($SIO_2$) Iron ($FeO_2$), Aluminium ($AL_2O_3$), Titanium ($TiO_2$), Calcium ($CaO$), Sodium ($Na_2O$), Potassium ($K_2O$), ಈ ಖನಿಜಾಂಶಗಳು ಇರುವುದು ಕಂಡಬಂದಿರುತ್ತವೆ. |
| ಆ) | ಕರಾವಳಿ ಜಿಲ್ಲೆಗಳಲ್ಲಿ ಎಷ್ಟು ಅಧಿಕೃತ ಮತ್ತು ಅನಧಿಕೃತ ಕೆಂಪು ಕಲ್ಲಿನಪಾಯಗಳಿವೆ; ಈ ಪಾಯಗಳು ಸ್ಥಗಿತಗೊಳ್ಳಲು ಕಾರಣಗಳೇನು; ಕೆಂಪು ಕಲ್ಲಿಗೆ ಕರ್ನಾಟಕ ಸರ್ಕಾರ ವಿಧಿಸುತ್ತಿರುವ ತೆರಿಗೆದರ ಎಷ್ಟು; | **ದಕ್ಷಿಣ ಕನ್ನಡ ಜಿಲ್ಲೆ:-**<br>➢ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ನಿಯಮ-32 ರಡಿ ಖಾಸಗಿ / ಪಟ್ಟಾ ಜಮೀನುಗಳಲ್ಲಿ ಕೆಂಪು ಕಲ್ಲುಗಣಿಗಾರಿಕೆಗೆ (ಲ್ಯಾಟರೈಟ್ 'ಎ' ಗ್ರೇಡ್ ಅಥವಾ ಕೈಗಾರಿಕಾ ಉದ್ದೇಶ) 19 ಗಣಿ ಗುತ್ತಿಗೆ ಲೈಸನ್ಸ್ ಗಳನ್ನು ಮಂಜೂರು ಮಾಡಿದ್ದು, ಚಾಲ್ತಿಯಲ್ಲಿರುತ್ತವೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-A(a) ಮತ್ತು 3-A(b) ರಡಿ ಹಲವು ಉದ್ದೇಶಗಳಿಗೆ ಅನುಮತಿ ನೀಡಲು ಅವಕಾಶವಿರುತ್ತದೆ. ಅದರಂತೆ 2025-26ನೇ ಸಾಲಿನಲ್ಲಿ 11 ಕಾರ್ಯಾದೇಶ ಗಳನ್ನು ನೀಡಲಾಗಿದ್ದು, ಚಾಲ್ತಿಯಲ್ಲಿರುತ್ತವೆ.<br>➢ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿಅನಧಿಕೃತ ಕೆಂಪು ಕಲ್ಲುಗಣಿಗಾರಿಕೆ ನಡೆಯುತ್ತಿದ್ದ ಪ್ರಕರಣಗಳನ್ನು ಪತ್ತೆ |

ಹಚ್ಚಿ ಗಣಿಚಟುವಟಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ. (ಡಿ & ಆರ್) ಕಾಯ್ದೆ -1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ಸಂಗ್ರಹಿಸಲಾಗಿದೆ. ವಿವರ ಕೆಳಕಂಡಂತಿದೆ:

| ಕ್ರ. ಸಂ. | ವರ್ಷ | ದಾಖಲಿಸಿದ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2022-23 | 0 | 63.77 |
| 2 | 2023-24 | 04 | 73.52 |
| 3 | 2024-25 | 17 | 36.32 |
| **ಒಟ್ಟು** | | **21** | **173.61** |

**ಉಡುಪಿ ಜಿಲ್ಲೆ**

- ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ನಿಯಮ 32 ರಡಿ ಖಾಸಗಿ / ಪಟ್ಟಾ ಜಮೀನುಗಳಲ್ಲಿ ಕೆಂಪು ಕಲ್ಲುಗಣಿಗಾರಿಕೆಗೆ (ಲ್ಯಾಟರೈಟ್ 'ಎ' ಗ್ರೇಡ್ (ಕೈಗಾರಿಕಾ ಉದ್ದೇಶ) ಮತ್ತು ಕಟ್ಟಡ ಕಲ್ಲು) ಒಟ್ಟು 02 ಗಣಿ ಗುತ್ತಿಗೆ ಲೈಸನ್ಸ್‌ಗಳನ್ನು ಮಂಜೂರು ಮಾಡಿದ್ದು, ಚಾಲ್ತಿಯಲ್ಲಿರುತ್ತವೆ.
- ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-A(a) ಮತ್ತು 3-A(b) ರಡಿ ಹಲವು ಉದ್ದೇಶಗಳಿಗೆ ಅನುಮತಿ ನೀಡಲು ಅವಕಾಶವಿರುತ್ತದೆ. ಅದರಂತೆ 2025-26ನೇ ಸಾಲಿನಲ್ಲಿ 38 ಕಾರ್ಯಾದೇಶ ಗಳನ್ನು ನೀಡಲಾಗಿದ್ದು, ಚಾಲ್ತಿಯಲ್ಲಿರುತ್ತವೆ.
- ಉಡುಪಿ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಅನಧಿಕೃತ ಕೆಂಪು ಕಲ್ಲು ಗಣಿಗಾರಿಕೆ ನಡೆಯುತ್ತಿದ್ದ ಪ್ರಕರಣಗಳನ್ನು ಪತ್ತೆಹಚಿ ಗಣಿ ಚಟುವಟಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ. (ಡಿ & ಆರ್) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ಸಂಗ್ರಹಿಸಲಾಗಿದೆ. ವಿವರ ಕೆಳಕಂಡಂತಿದೆ:

| ಕ್ರ. ಸಂ. | ವರ್ಷ | ದಾಖಲಿಸಿದ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2022-23 | 04 | 15.34 |
| 2 | 2023-24 | 0 | 17.76 |
| 3 | 2024-25 | 06 | 13.24 |
| **ಒಟ್ಟು** | | **10** | **46.34** |

- ಪಟ್ಟಾ ಜಮೀನುಗಳಲ್ಲಿ ನಿಯಮ 32 ರಡಿ ಲೈಸೆನ್ಸ್ ಪಡೆದ ಪರವಾನಗಿದಾರರಿಂದ ಕೆಂಪುಕಲ್ಲಿಗೆ (ಲ್ಯಾಟರೈಟ್ ಬ್ರಿಕ್ಸ್) ಪ್ರತಿ ಮೆಟ್ರಿಕ್ ಟನ್ ಕೆಂಪು ಕಲ್ಲಿಗೆ ₹70/- ರಾಜಧನ ಹಾಗೂ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತ ₹21/- ನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.
- ಲೈಸೆನ್ಸ್ ಪಡೆದ ಪರವಾನಗಿದಾರರು ಕೆಂಪು ಕಲ್ಲು ಉಪಖನಿಜವನ್ನು dispatched for use in cement or chemical industries or abrasive or refractory purpose (below threshold value as specified by IBM from time to time) ಗೆ ಸಾಗಾಣಿಕೆ ಮಾಡಿದಲ್ಲಿ ₹200/- ರಾಜಧನ ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತ ₹60/- ಗಳನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.
- ನಿಯಮ 3-A(a)ರಡಿ ಕೆಂಪು ಕಲ್ಲು ತೆಗೆದು ಸಾಗಾಣಿಕೆ ಮಾಡುವ ಪ್ರತಿ ಮೆಟ್ರಿಕ್ ಟನ್‌ಗೆ ರಾಜಧನ ₹70/-, ಹೆಚ್ಚುವರಿ ಪಾವತಿ ₹28/- ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತ ₹7/- ನ್ನು

| | | |
|---|---|---|
| | | ವಿಧಿಸಿ ಸಂಗ್ರಹಿಸಲಾಗುತ್ತಿದೆ<br>➢ ನಿಯಮ 3-A(b) ರಡಿ ಕೆಂಪು ಕಲ್ಲು ತೆಗೆದು ಸಾಗಾಣಿಕೆ ಮಾಡುವ ಪ್ರತಿ ಮೆಟ್ರಿಕ್ ಟನ್‌ಗೆ ರಾಜಧನ ₹70/-, ಹೆಚ್ಚುವರಿ ಪಾವತಿ ₹28/- ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತ ₹7/- ಮತ್ತು ಷೆಡ್ಯೂಲ್ II-D ಮೊತ್ತ ₹150/- ಗಳನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.<br>➢ ಕೆಂಪು ಕಲ್ಲು ಉಪಖನಿಜದ ಬಳಕೆಗೆ ಅನುಗುಣವಾಗಿ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ನಿಗದಿಪಡಿಸಲಾಗಿರುತ್ತದೆ |
| ಇ) | ಕೇರಳ ಮಾದರಿಯಂತೆ ಕರಾವಳಿಯ ಕೆಂಪು ಕಲ್ಲು ಕೋರೆಗಳಿಗೆ ಮಿತ ಮಾದರಿಯಲ್ಲಿ ತೆರಿಗೆ ವಿಧಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು; ಅದಿರು ಮಣ್ಣಿನ ಗಣಿಗಾರಿಕೆಯ ನಿಯಮಗಳೇನು; | ➢ ಕೆಂಪು ಕಲ್ಲು (ಲ್ಯಾಟರೈಟ್) ಖನಿಜವು $Al_2O_3$ ಖನಿಜಾಂಶದ ತಾಂತ್ರಿಕ ಅಂಶಗಳ ಆಧಾರದ ಮೇಲೆ ಮುಖ್ಯ ಖನಿಜ ಮತ್ತು ಉಪಖನಿಜವೆಂದು ವರ್ಗೀಕೃತಗೊಳ್ಳುತ್ತದೆ.<br>➢ ಕೆ.ಎಂ.ಎಂ.ಸಿ.ಆರ್ ನಿಯಮಗಳಡಿ ಉಪಖನಿಜದ ವ್ಯಾಪ್ತಿಗೊಳಪಡುವ ಕೆಂಪು ಕಲ್ಲು ಉಪಖನಿಜಕ್ಕೆ ನಿಯಮ 3-A(a), 3-A(b) ಮತ್ತು 32 ರಡಿಯಲ್ಲಿನ ಅವಕಾಶದಂತೆ ಖಾಸಗಿ/ ಪಟ್ಟಾ ಜಮೀನುಗಳಲ್ಲಿ ತೆರವುಗೊಳಿಸಲು ಕಾರ್ಯನುಮತಿ/ ಲೈಸನ್ಸ್ ನೀಡಲಾಗುತ್ತಿದೆ.<br>➢ ಮುಖ್ಯ ಖನಿಜಗಳ (ಅದಿರು ಮಣ್ಣು) ಸಂಬಂಧ ಲಭ್ಯತೆ ದೃಢಪಟ್ಟಿರುವ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 10(B) ರಡಿ ಹರಾಜು ಮೂಲಕ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಖನಿಜ ಲಭ್ಯತೆ ದೃಢಪಡದ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 11 ರಡಿಯಲ್ಲಿ ಸಂಯುಕ್ತ ಪರವಾನಿಗೆ (Composite Licence) (Prospecting-cum-Mining Lease) ನ್ನು ಸದರಿ ಕಾಯ್ದೆಯಡಿಯಲ್ಲಿ ರೂಪಿಸಲಾದ Mineral (Auction) Rules, 2015ರ ನಿಯಮ 9(4) ಮತ್ತು 10 ರಂತೆ ಹರಾಜು ಮಾಡಿ ಯಶಸ್ವಿಯಾದ ಬಿಡ್‌ದಾರರನ್ನು ಪರಿಗಣಿಸಿದ ನಂತರ The Mineral (Auction) Rules, 2015<br>Mineral (Other Than Atomic and Hydro Carbons Energy Minerals) Concession Rules 2016 ರಡಿ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶವಿದೆ. |
| ಈ) | ಮರಳು ಗಣಿಗಾರಿಕೆ ಮತ್ತು ಕೆಂಪು ಕಲ್ಲು ಪಾಯಗಳು ಸ್ಥಗಿತಗೊಂಡ ಕಾರಣ ಅದನ್ನು ಅವಲಂಭಿಸಿದ ಇತರರ ಜೀವನೋಪಾಯಕ್ಕೆ ತೊಂದರೆಯಾಗಿರುವುದನ್ನು ಪರಿಹರಿಸಲು ಕ್ರಮವಹಿಸಲಾಗಿದೆಯೇ? | ➢ **ದಕ್ಷಿಣ ಕನ್ನಡ ಜಿಲ್ಲಾ** ವ್ಯಾಪ್ತಿಯಲ್ಲಿ ಕೆಂಪು ಕಲ್ಲು ಗಣಿಗಾರಿಕೆಗೆ 19 ಗುತ್ತಿಗೆಗಳನ್ನು ಮಂಜೂರು ಮಾಡಿ, ಚಾಲ್ತಿಯಲ್ಲಿದ್ದು, ಸದರಿ ಗುತ್ತಿಗೆಗಳಿಂದ 2024-25ನೇ ಸಾಲಿನಲ್ಲಿ 1,14,539 ಮೆಟ್ರಿಕ್ ಟನ್ ಮತ್ತು 2025-26ನೇ ಸಾಲಿನಲ್ಲಿ 5,11,912 ಮೆಟ್ರಿಕ್ ಟನ್ ಕೆಂಪುಕಲ್ಲನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-A(a) ಮತ್ತು 3-A(b) ರಂತೆ ಲ್ಯಾಟರೈಟ್ ತೆಗೆಯಲು 11 ಕಾರ್ಯಾದೇಶಗಳನ್ನು ಮಂಜೂರು ಮಾಡಿ, ಚಾಲ್ತಿಯಲ್ಲಿರುತ್ತವೆ. ಸದರಿ ಗುತ್ತಿಗೆಗಳಿಂದ 2025-26ನೇ ಸಾಲಿನಲ್ಲಿ 9975 ಮೆಟ್ರಿಕ್ ಟನ್ ಮತ್ತು 2024-25ನೇ ಸಾಲಿನಲ್ಲಿ 25 ಕಾರ್ಯಾದೇಶಗಳಲ್ಲಿ 9659 ಮೆಟ್ರಿಕ್ ಟನ್ ಲ್ಯಾಟರೈಟ್ ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಮರಳು ಪೂರೈಕೆ ಸಂಬಂಧ ದಕ್ಷಿಣ ಕನ್ನಡ ಜಿಲ್ಲೆಯ Non- CRZ ಪ್ರದೇಶದ ವ್ಯಾಪ್ತಿಯಲ್ಲಿ 27 ಮರಳು ಗಣಿ ಗುತ್ತಿಗೆಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಂಜೂರು ಮಾಡಿದ್ದು, 05 ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುತ್ತದೆ. ಸದರಿ 32 ಮರಳು ಬ್ಲಾಕ್‌ಗಳಿಂದ 7,19,936 ಮೆಟ್ರಿಕ್ ಟನ್ ಮರಳು ಗಣಿಗಾರಿಕೆಗೆ ಲಭ್ಯವಿದ್ದು, 2024-25ನೇ ಸಾಲಿನಲ್ಲಿ 74,846 ಮೆಟ್ರಿಕ್ ಟನ್ ಮರಳನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ. 2025-26ನೇ ಸಾಲಿನಲ್ಲಿ ಪ್ರಸ್ತುತ 16 ಟೆಂಡರ್ ಕಂ ಹರಾಜು ಮೂಲಕ ಮಂಜೂರು ಮಾಡಿರುವ ಮತ್ತು 03 ಸರ್ಕಾರಿ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುವ ಮರಳು ಗಣಿ ಗುತ್ತಿಗೆಗಳ ಚಾಲ್ತಿಯಲ್ಲಿದ್ದು, ಸದರಿ |

| | | |
|---|---|---|
| | | ಮರಳು ಗಣಿ ಗುತ್ತಿಗೆಗಳಿಂದ 4,07,697 ಮೆಟ್ರಿಕ್ ಟನ್ ಗಣಿಗಾರಿಕೆಗೆ ಲಭ್ಯವಿದ್ದು, 34,805 ಮೆಟ್ರಿಕ್ ಟನ್ ಮರಳನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಜಿಲ್ಲೆಯಲ್ಲಿ 16 ಎಂ-ಸ್ಯಾಂಡ್ ಉತ್ಪಾದನೆ ಸ್ಟೋನ್ ಕ್ರಷರ್ ಘಟಕಗಳಿದ್ದು, ಸದರಿ ಘಟಕಗಳಿಂದ 2024-25 ನೇ ಸಾಲಿನಲ್ಲಿ 1,16,741 ಮೆಟ್ರಿಕ್ ಟನ್ ಹಾಗೂ 2025-26ನೇ ಸಾಲಿನ ಜುಲೈ ಅಂತ್ಯದವರೆಗೆ 1,34,706 ಮೆಟ್ರಿಕ್ ಟನ್ ಪ್ರಮಾಣದ ಎಂ-ಸ್ಯಾಂಡ್ ಉತ್ಪಾದನೆಯಾಗಿ ಸರಬರಾಜಾಗಿರುತ್ತದೆ.<br>➢ **ಉಡುಪಿ ಜಿಲ್ಲಾ** ವ್ಯಾಪ್ತಿಯಲ್ಲಿ ಕೆಂಪು ಕಲ್ಲು ಗಣಿಗಾರಿಕೆಗೆ 02 ಗುತ್ತಿಗೆಗಳನ್ನು ಮಂಜೂರು ಮಾಡಿ, ಚಾಲ್ತಿಯಲ್ಲಿರುತ್ತವೆ. ಸದರಿ ಗುತ್ತಿಗೆಗಳಿಂದ 2024-25ನೇ ಸಾಲಿನಲ್ಲಿ 20,463 ಮೆಟ್ರಿಕ್ ಟನ್ ಮತ್ತು 2025-26ನೇ ಸಾಲಿನಲ್ಲಿ 14,173 ಮೆಟ್ರಿಕ್ ಟನ್ ಕೆಂಪು ಕಲ್ಲನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-3-A(a) ಮತ್ತು 3-A(b) ರಂತೆ ಲ್ಯಾಟರೈಟ್ ತೆಗೆಯಲು 38 ಕಾರ್ಯಾದೇಶಗಳನ್ನು ಮಂಜೂರು ಮಾಡಿ, ಚಾಲ್ತಿಯಲ್ಲಿದ್ದು, ಸದರಿ ಗುತ್ತಿಗೆಗಳಿಂದ 2025-26ನೇ ಸಾಲಿನಲ್ಲಿ 10,370 ಮೆಟ್ರಿಕ್ ಟನ್ ಮತ್ತು 2024-25ನೇ ಸಾಲಿನಲ್ಲಿ 24 ಕಾರ್ಯಾದೇಶಗಳಲ್ಲಿ 1,040 ಮೆಟ್ರಿಕ್ ಟನ್ ಲ್ಯಾಟರೈಟ್ ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಮರಳು ಪೂರೈಕೆ ಸಂಬಂಧ ಉಡುಪಿ ಜಿಲ್ಲಾ Non- CRZ ಪ್ರದೇಶದ ವ್ಯಾಪ್ತಿಯಲ್ಲಿ 05 ಮರಳು ಗಣಿ ಗುತ್ತಿಗೆಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಂಜೂರು ಮಾಡಿದ್ದು, 08 ಮರಳು ಬ್ಲಾಕ್ ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುತ್ತದೆ. ಸದರಿ 13 ಮರಳು ಬ್ಲಾಕ್‌ಗಳಿಂದ 3,65,955 ಮೆಟ್ರಿಕ್ ಟನ್ ಮರಳು ಗಣಿಗಾರಿಕೆಗೆ ಲಭ್ಯವಿದ್ದು, 2024-25ನೇ ಸಾಲಿನಲ್ಲಿ 1,02,590 ಮೆಟ್ರಿಕ್ ಟನ್ ಮರಳನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ. 2025-26ನೇ ಸಾಲಿನಲ್ಲಿ ಪ್ರಸ್ತುತ 01 ಸರ್ಕಾರಿ ಕಾಮಗಾರಿಗೆ ಮಂಜೂರು ಮಾಡಿ ಚಾಲ್ತಿಯಲ್ಲಿದ್ದು, ಸದರಿ ಮರಳು ಗಣಿ ಗುತ್ತಿಗೆಯಿಂದ 18,790 ಮೆಟ್ರಿಕ್ ಟನ್ ಗಣಿಗಾರಿಕೆಗೆ ಲಭ್ಯವಿರುತ್ತದೆ. ಆದರೆ ಸ್ಥಳೀಯ ಸಮಸ್ಯೆಯ ಕಾರಣ ಮರಳು ಗಣಿಗಾರಿಕೆ ಪ್ರಾರಂಭಿಸಲಾಗಿರುವುದಿಲ್ಲ.<br>➢ ಉಡುಪಿ ಜಿಲ್ಲೆಯಲ್ಲಿ 27 ಎಂ-ಸ್ಯಾಂಡ್ ಉತ್ಪಾದನೆ ಸ್ಟೋನ್ ಕ್ರಷರ್ ಘಟಕಗಳಿದ್ದು, ಸದರಿ ಘಟಕಗಳಿಂದ 2024-25 ನೇ ಸಾಲಿನಲ್ಲಿ 2,86,702 ಮೆಟ್ರಿಕ್ ಟನ್ ಹಾಗೂ 2025-26ನೇ ಸಾಲಿನ ಜುಲೈ ಅಂತ್ಯದವರೆಗೆ 1,70,913 ಮೆಟ್ರಿಕ್ ಟನ್ ಪ್ರಮಾಣದ ಎಂ-ಸ್ಯಾಂಡ್ ಉತ್ಪಾದನೆಯಾಗಿ ಸರಬರಾಜಾಗಿರುತ್ತದೆ.<br>➢ ಕರಾವಳಿ ನಿಯಂತ್ರಣ ವಲಯ (CRZ) ಪ್ರದೇಶದಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸುವ ಸಂಬಂಧ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ 08.05.2023 ರಂದು ಕರಡು ಮಾರ್ಗಸೂಚಿಗಳನ್ನು ಹೊರಡಿಸಿದೆ. ಸದರಿ ಕರಡು ಮಾರ್ಗಸೂಚಿಗಳಿಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಕರಡು ಮಾರ್ಗಸೂಚಿಗಳನ್ನು ಭಾರತ ಸರ್ಕಾರದಿಂದ ಅಂತಿಮಗೊಳಿಸಿ, ಅಧಿಸೂಚನೆ ಜಾರಿಯಾದ ನಂತರ ಜಿಲ್ಲಾ 07 ಸದಸ್ಯರ ಸಮಿತಿಯು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸುತ್ತದೆ. |
| ಉ) | ಕೆಂಪು ಕಲ್ಲಿನ ಕೋರಿಗೆ ಯಾವ ಯಾವ ಇಲಾಖೆಗಳ ಪರವಾನಗೆ ಯಾವ ಕಾರಣಕ್ಕಾಗಿ ಅಗತ್ಯವಿದೆ ಮತ್ತು ಅದನ್ನು ಸಿಂಗಲ್ | ➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 32 ರಂತೆ ಪಟ್ಟಾ ಜಮೀನುಗಳಲ್ಲಿ ಕೆಂಪು ಕಲ್ಲು ಗಣಿಗಾರಿಕೆಗೆ ಲೈಸೆನ್ಸ್ ಮಂಜೂರಾತಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ, ಭೂಪರಿವರ್ತನೆ ಆದೇಶ, ಅನುಮೋದಿತ ಕ್ವಾರಿ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ |

| | | |
|---|---|---|
| | ವಿಂಡೋ ಮೂಲಕ ನೀಡಲು ಸರ್ಕಾರ ಕ್ರಮವಹಿಸುವುದೇ; | ಪಡೆದು ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-A(a) ರಂತೆ, ಪಟ್ಟಾ ಜಮೀನುಗಳನ್ನು ಸಮತಟ್ಟು ಮಾಡುವ ಸಂದರ್ಭದಲ್ಲಿ ಸ್ವಂತ ಉದ್ದೇಶಕ್ಕೆ ಬಳಕೆಯಾಗಿ ಹೆಚ್ಚುವರಿಯಾಗಿ ಉಳಿಯುವ ಕೆಂಪು ಕಲ್ಲನ್ನು ತೆಗೆದು ಸಾಗಾಣಿಕೆ ಮಾಡಲು ಅನುಮತಿ ನೀಡಲಾಗುತ್ತಿದೆ.<br>➢ ನಿಯಮ-3-A(b) ರನ್ವಯ ಪಟ್ಟಾ ಜಮೀನಿನಲ್ಲಿನ ಕೆಂಪು ಕಲ್ಲನ್ನು ತೆರವುಗೊಳಿಸಿ ಕೃಷಿ ಯೋಗ್ಯ ಜಮೀನನ್ನಾಗಿ ಅಭಿವೃದ್ಧಿ ಮಾಡುವ ಸಂದರ್ಭದಲ್ಲಿ ಸ್ವಂತ ಉದ್ದೇಶಕ್ಕೆ ಬಳಕೆಯಾಗಿ ಹೆಚ್ಚುವರಿಯಾಗಿ ಉಳಿಯುವ ಕೆಂಪು ಕಲ್ಲನ್ನು ತೆಗೆದು ಸಾಗಾಣಿಕೆ ಮಾಡಲು ಅನುಮತಿ ನೀಡಲಾಗುತ್ತಿದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 3-A(b) ರಂತೆ ಕೆಂಪುಕಲ್ಲು ತೆಗೆಯಲು ಕೃಷಿ ಇಲಾಖೆಯಿಂದ ದೃಢೀಕರಣ ಪಡೆದು ಕಾರ್ಯಾದೇಶ ನೀಡಲಾಗುತ್ತಿದೆ. |
| ಊ) | ಈ ಹಿಂದೆ ಮಂಗಳೂರಿನ ಕೆತ್ತಿಕಲ್ ಪ್ರದೇಶದಲ್ಲಿ ಅಕ್ರಮವಾಗಿ ಮಣ್ಣು ಸಾಗಿಸಿದ್ದು, ಈಗ ರಾಷ್ಟ್ರೀಯ ಹೆದ್ದಾರಿಗೆ ಅಪಾಯ ಉಂಟು ಮಾಡಿರುವ ವಿಷಯ ಗೊತ್ತಿದ್ದರೂ ಈಗ ಮಣ್ಣಿನ ಅದಿರು ಗಣಿಗಾರಿಕೆ ನಡೆಯುತ್ತಿದ್ದರೂ ಗಣಿ ಇಲಾಖೆ ಯಾವುದೇ ಕ್ರಮ ಜರುಗಿಸದಿರಲು ಕಾರಣವೇನು? | ➢ ಮಂಗಳೂರು ತಾಲೂಕಿನ ತಿರುವೈಲು ಗ್ರಾಮದ ಕೆತ್ತಿಕಲ್ಲು ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮಣ್ಣು ತೆಗೆದು ಸಾಗಿಸಿದ್ದು, ರಾಷ್ಟ್ರೀಯ ಹೆದ್ದಾರಿಗೆ ಅಪಾಯ ಉಂಟು ಮಾಡಿರುವ ಬಗ್ಗೆ ಪಟ್ಟಾ ಜಮೀನು ಮಾಲೀಕರು ಹಾಗೂ ಮೆ\|\| ದಿಲೀಪ್ ಬಿಲ್ಡ್ ಕಾನ್ ಲಿ., ರವರ ವಿರುದ್ಧ ಮಾನ್ಯ 3ನೇ ಜೆ.ಎಂ.ಎಫ್.ಸಿ ನ್ಯಾಯಾಲಯ ಮಂಗಳೂರು ಇಲ್ಲಿ ದಿನಾಂಕ: 05-07-2024 ರಂದು ಪಿಸಿಆರ್ ಸಂಖ್ಯೆ:71/2024 ರಂತೆ ಖಾಸಗಿ ಪ್ರಕರಣ ದಾಖಲಿಸಲಾಗಿರುತ್ತದೆ.<br>➢ ಸದರಿ ಪ್ರದೇಶದಲ್ಲಿ ಅನಧಿಕೃತ ಮಣ್ಣು ಗಣಿಗಾರಿಕೆ/ ಸಾಗಾಣಿಕೆ ಸಂಬಂಧ ಮೆ\|\| ದಿಲೀಪ್ ಬಿಲ್ಡ್ ಕಾನ್ ಲಿ., ರವರ ವಿರುದ್ಧ ಮತ್ತೊಮ್ಮೆ ಮಾನ್ಯ 3ನೇ ಜೆ.ಎಂ.ಎಫ್.ಸಿ ನ್ಯಾಯಾಲಯ ಮಂಗಳೂರು ಇಲ್ಲ ದಿನಾಂಕ:03-08-2024 ರಂದು ಪಿಸಿಆರ್ ಸಂಖ್ಯೆ: 77/2024 ರಂತೆ ಖಾಸಗಿ ಪ್ರಕರಣ ದಾಖಲಿಸಲಾಗಿರುತ್ತದೆ. |

ಸಂಖ್ಯೆ ಸಿಐ -ಎಂಎಂಎನ್/202/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.